## ಮದುವೆಯ ಬೊಜ್ಜು ಕರಗೀತೆ?

ಪ್ರವೀಣ್ ಕುಲಕರ್ಣಿ ಅವರ 'ಮದುವೆಯ ಬೊಜ್ಜು ಕರಗೀತೆ?' (ಅ.1) ಸಮಯೋಚಿತ ಲೇಖನ. ಸರಳ ಮದುವೆಯೆಡೆ ಎಲ್ಲರೂ ಚಿಂತಿಸುವುದು ಅತ್ಯಗತ್ಯ. ಆ ಕುರಿತಾಗಿ ಸರ್ಕಾರ ಕಾನೂನು ತರಬೇಕು. ಅದ್ದೂರಿ ಮದುವೆ ಮಾಡಿ, ಒಣ ಪ್ರತಿಷ್ಠೆಯನ್ನು ಮೆರೆಯುವವರ ವಿರುದ್ಧ ಸರ್ಕಾರ ಕಾನೂನು ಜರುಗಿಸಬೇಕು. ಮಾತ್ರವಲ್ಲ, ಅಂತಹ ಮದುವೆಯನ್ನು ಪ್ರಸಾರ ಮಾಡುವ ಮಾಧ್ಯಮಗಳ ಮೇಲೂ ಗಮನವನ್ನಿರಿಸಬೇಕು.

—ಸತ್ಯವತಿ ಕುಳಿಹಿತ್ತಲು, ಚಿಕ್ಕಮಗಳೂರು

ಇಡೀ ವಿಶ್ವವನ್ನೇ ತಲ್ಲಣಗೊಳಿಸಿರುವ ಕೊರೊನಾ ವೈರಾಣು ಜನಸಾಮಾನ್ಯರ ಬದುಕಿನಲ್ಲೂ ಹಲವಾರು ಬದಲಾವಣೆಗಳನ್ನು ತಂದಿದೆ. ಸಭೆ, ಸಮಾರಂಭ, ಮದುವೆ, ಮುಂಜಿಯ ಸ್ವರೂಪವನ್ನೇ ಬದಲಾಯಿಸಿದೆ. ಪ್ರತಿಷ್ಠೆ, ಸಿರಿತನ, ಘನತೆಯ ಪ್ರತೀಕವಾದ ಸಮಾರಂಭ, ಕೇವಲ ಮನೆಯವರಿಗೆ ಮಾತ್ರ ಸೀಮಿತವಾಗಿದೆ. ಇಷ್ಟು ಸರಳವಾದ ಜೀವನವನ್ನು ಇಷ್ಟು ಜಟಿಲವೇಕೆ ಮಾಡಿಕೊಂಡಿದ್ದೇವೆ ಎಂಬ ಪ್ರಶ್ನೆ ಕಾಡುತ್ತದೆ. ಯುವ ಪೀಳಿಗೆ ಸರಳ ವಿವಾಹವನ್ನು ಅನುಸರಿಸಿದರೆ ಪೋಷಕರ ಹೊರೆ–ಶ್ರಮ ಖಂಡಿತ ಕಡಿಮೆಯಾಗುವುದು.

—ಅಖಿಲ ಗುಣಧರ್



ಕೊರೊನಾದಿಂದ ತತ್ತರಿಸಿರುವ ಸಮಾಜ, ಆರ್ಥಿಕವಾಗಿ ನಲುಗಿದೆ. ಅದ್ದೂರಿ ಮದುವೆ ಮೊದಲಾದ ಕಾರ್ಯಕ್ರಮಗಳನ್ನು ನಡೆಸಲು ಕೊರೋನ ಮಹಾಮಾರಿ ಒಂದು ರೀತಿಯಲ್ಲಿ ಸಹಾಯವೇ ಆಗಿದೆ. ಪೋಷಕರನೇಕರು ವಿವಾಹದ ಖರ್ಚಿಗೆ ಸಾಲದ ಶೂಲವೇರುವುದನ್ನು ತಡೆದಿದೆ. ಆಮಂತ್ರಣಕ್ಕೆ ಸರ್ಕಾರ 50 ಮಂದಿಗೆ ಮಾತ್ರ ಅನುಮತಿ ನೀಡಿದ್ದು, ಅನವಶ್ಯಕ ಬಾಬತ್ತಿಗೆ ಬ್ರೇಕ್ ದೊರೆತು ಅನುಕೂಲವಾದರೂ ಅನೇಕ ಕೈಗಳಿಗೆ ಕೆಲಸವೂ ಇಲ್ಲ, ಪಗಾರವೂ ಇಲ್ಲದಂತಾಗಿದೆ. ಈ ವೈರಸ್ ಭಯದ ಸಲುವಾಗಿ ಹಾದಿಬೀದಿಯಲ್ಲಿ ಶುಚಿತ್ವಕ್ಕೆ ಒತ್ತು ನೀಡಿದೆ. ಎಲ್ಲ ವರ್ಗದ ಜನರು ಮಾಸ್ಕ್ ಧರಿಸುವಂತಾಗಿದೆ.

—ಎಂ.ಎಸ್. ಬೆಂಗಳೂರು

## ಜಮೀನು ಉಳಿಯಿತು

ಲೇಖನ ಓದಿ ಬಹಳ ಸಂತೋಷವಾಯಿತು. ನಾನು ಸಹ ಮೇ 10, 2020ರಂದು ನನ್ನ ಮಗನ ಮದುವೆಯನ್ನು ಏರ್ಪಾಟು ಮಾಡಿದ್ದೆನು. ನಾನೇನು ಹಣವಂತನಲ್ಲ. ಸಾಲ ಮಾಡಿ ಮದುವೆ ಮಾಡಬೇಕಿತ್ತು. ಮುಂದೆ ಸಾಲತೀರಿಸಲು ಜಮೀನು ಮಾರುವ ಯೋಜನೆ ಹಾಕಿದ್ದೆ. ಈ ಮದುವೆಗೆ ಅಂದಾಜು ವೆಚ್ಚ ನಾಲ್ಕು ಲಕ್ಷ ರೂಪಾಯಿಗಳಾಗಿತ್ತು. ಲಗ್ನಪತ್ರಿಕೆ, ಛತ್ರ, ಬ್ಯಾಂಡ್ ಸೆಟ್, ಡೆಕೋರೇಶನ್, ಅಡುಗೆ ಮಾಡುವವರು ಇನ್ನೂ ಮುಂತಾದ ಎಲ್ಲಾ ವ್ಯವಸ್ಥೆ ಮಾಡಲಾಗಿತ್ತು. ಅಷ್ಟರಲ್ಲಿ ಲಾಕ್‌ಡೌನ್ ಪ್ರಾರಂಭವಾಗಿ ಮದುವೆ ಮುಂದೂಡುವ ಬಗ್ಗೆ ಚರ್ಚಿಸಲಾಯಿತು. ಕೊನೆಗೆ ಅದೇ ದಿನಾಂಕದಂದೇ ಮನೆಯ ಮುಂದೆ ಸರಳವಾಗಿ ಮದುವೆ ಮಾಡಲು ನಿರ್ಧರಿಸಿದೆವು. ತಹಶೀಲ್ದಾರರು ಕೇವಲ ಹತ್ತು ಜನಕ್ಕೆ ಪರವಾನಿಗೆ ಕೊಟ್ಟರು. ನಮ್ಮ ಮನೆಯ ಸಣ್ಣ ಆವರಣದಲ್ಲೇ ಮದುವೆಯನ್ನು ಸಾಂಪ್ರದಾಯಿಕವಾಗಿ ಮುಗಿಸಿದೆವು. ಈ ಸರಳ ಮದುವೆಯ ವೆಚ್ಚ ಅಂದಾಜು ಎಂಬತ್ತು ಸಾವಿರ ರೂಪಾಯಿ. ಸುಮಾರು ಮೂರು ಲಕ್ಷ ರೂಪಾಯಿಗಳ ಉಳಿತಾಯವಾಯಿತು. ಮದುವೆಯೂ ಆಯಿತು; ಜಮೀನೂ ಉಳಿಯಿತು.

—ಚನ್ನವೀರಪ್ಪ ಬಿದ್ರಳ್ಳಿ

## ಮಳೆಖುತು ಪ್ರವಾಸ

'ಮಳೆಖುತು ಪ್ರವಾಸ ಮರಳೀತೇ ವೈಭವ?' (ಸೆ. 24) ಲೇಖನಕ್ಕೆ ಪೂರಕವಾದ ಒಂದು ವಿಚಾರವೆಂದರೆ ಕೊರೊನಾ ಸಂಕಷ್ಟದಲ್ಲಿ ಕೇವಲ ಪ್ರವಾಸೋದ್ಯಮ ಮಾತ್ರ ಸಿಲುಕಿಲ್ಲ. ಕೊರೊನಾ ಇನ್ನೂ ಸಹ ನಿಯಂತ್ರಣಕ್ಕೆ ಬಾರದ ಸನ್ನಿವೇಶದಲ್ಲಿ, ಕೇವಲ ಸರ್ಕಾರದ ನಿರ್ಬಂಧಗಳು ಸಡಿಲಗೊಂಡಿರುವ ಏಕೈಕ ಕಾರಣಕ್ಕೆ ಪ್ರವಾಸಿ ತಾಣಗಳತ್ತ ಧಾವಿಸುವುದು ಉಚಿತವಲ್ಲ. ಗ್ರಾಮೀಣ ಭಾಗದಲ್ಲೂ ಈ ಸೋಂಕು ತಗಲಿದೆ. ಅಲ್ಲಿ ನಗರ ಪ್ರದೇಶಗಳ ನಿವಾಸಿಗಳಿಗಿರುವಷ್ಟು ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ. ಹೀಗಾಗಿ ಪ್ರವಾಸಿಗರು ಈ ವಿಚಾರದಲ್ಲಿ ಕೊಂಚ ಮುಂಜಾಗರೂಕತೆ ವಹಿಸುವುದು ಸೂಕ್ತ.

—ರಾಜೀವ್ ಮಾಗಲ್, ಹಾಸನ

## ಟೆನಿಸ್ ರಾಣಿ

ಏಷ್ಯಾದ ಟೆನಿಸ್ ರಾಣಿ ಎಂದೇ ಖ್ಯಾತರಾಗಿರುವ, ಸಾಮಾಜಿಕ ಹೋರಾಟಗಳಲ್ಲೂ ತನ್ನನ್ನು ತೊಡಗಿಸಿಕೊಂಡಿರುವ, ಆಕ್ರಮಣಕಾರಿ ಆಟಗಾರ್ತಿ ಜಪಾನಿನ ನವೊಮಿ ಓಸಾಕಾ ಅವರ ಟೆನಿಸ್ ಅಂಗಣದ ಸಾಧನೆಯನ್ನು ಪ್ರಮೋದ ಅವರು ಸೊಗಸಾಗಿ ಪರಿಚಯಿಸಿದ್ದಾರೆ.

—ಪಿ. ಜಯವಂತ ಪೈ, ಕುಂದಾಪುರ

## ಚಿನ್ನಕ್ಕೂ ಚೆನ್ನದ ಕಾಲ


ಕಾವ್ಯಶ್ರೀ ಎನ್. ಅವರ 'ಚಿನ್ನಕೂ ಚೆನ್ನದ ಕಾಲ' (ಅ.1) ಲೇಖನ ಚೆನ್ನಾಗಿತ್ತು. ಉಪಯುಕ್ತ ಮಾಹಿತಿ, ತಿಳಿಯುವ ಹಾಗೆ ಬರೆದಿದ್ದಾರೆ.

—ನರಸಿಂಹ ರಾವ್, ಬೆಂಗಳೂರು

## ಅಳುವ ಹೂವುಗಳು

ಸುಮಂಗಲಾ ಎಸ್. ಮುಮ್ಮಿಗಟ್ಟಿ ಬರೆದಿರುವ 'ಅಳುವ ಹೂವುಗಳು' (ಅ.1) ಕಥೆ ಚೆನ್ನಾಗಿತ್ತು. ಅರಳುವ ಹೂವುಗಳು ನಗುತ್ತಿವೆ ಎಂದು ಭಾವಿಸುವುದು ಸಹಜ. ಆದರೆ ಇಲ್ಲಿ ಅರಳುವ ಹೂವುಗಳು ರಾಜಕುಮಾರಿಯ ವಿರಹ ಭಾವದ ಕಣ್ಣೀರಿನ ಪ್ರತೀಕಗಳು ಎಂದು ತಿಳಿದು ಅಚ್ಚರಿಯಾಯ್ತು. ಹೂವುಗಳ ಜೊತೆಗೆ ಪ್ರಭುತ್ವದ ತಾರತಮ್ಯದ ಕ್ರೌರ್ಯವನ್ನು ಕಾಣಿಸುವ ಕಥೆ ಹೆಣೆದಿರುವ ಕಥೆಗಾರರಿಗೆ ಅಭಿನಂದನೆಗಳು. ಭಾವು ಪತ್ತಾರ ಅವರ ಚಿತ್ರವೂ ಅಷ್ಟೇ ಸೊಗಸಾಗಿದೆ.

—ಶಂಕರನಾರಾಯಣ ಪಿ.ಕೆ., ರಾಮದುರ್ಗ





## ಅದಿತಿ ಎಂಬ ಪ್ರತಿಭೆ

ಗಾಂಧಿನಗರ ಪೋಸ್ಟ್ ಪುಟದಲ್ಲಿ ಪದ್ಮನಾಭ ಭಟ್ ಬರೆದಿರುವ 'ಹಾಡು ನನ್ನ ಲೈಫ್ ಸ್ಟೈಲ್' (ಅ.1) ಲೇಖನ ಸೊಗಸಾಗಿದೆ. ಖ್ಯಾತ ಕಲಾವಿದ ಅರುಣ್ ಸಾಗರ್ ಅವರ ಮಗಳಾದ ಅದಿತಿ ಸಾಗರ್ ಅವರ ಬಗ್ಗೆ ತಿಳಿದು, 'ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು' ಎಂಬ ಮಾತು ನೆನಪಾಯ್ತು. ತಂದೆಯಂತೆ ಪ್ರತಿಭಾವಂತ ಕಲಾವಿದೆಯಾಗಿದ್ದರೂ ಸ್ವತಂತ್ರವಾಗಿ ಬೆಳೆಯಬೇಕೆಂಬ ಇಚ್ಛೆ, ಅವರ ಪ್ರತಿಭೆ–ಆತ್ಮವಿಶ್ವಾಸಕ್ಕೆ ಹಿಡಿದ ಕನ್ನಡಿಯಾಗಿದೆ.

—ಅನಸೂಯ ತ್ರಿವಿಕ್ರಮ್ ಕೇದಿಗೆಮನೆ